ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು

64 : (182)

ಶ್ರೀ ಎನ್.ಎ.ಹ್ಯಾರಿಸ್ (ಶಾಂತಿನಗರ)

ಅ) ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆದ ಅಪರಾಧ ಮತ್ತು ಕೊಲೆ ಪ್ರಕರಣಗಳು ಎಷ್ಟು; ಅವುಗಳ ನಿಯಂತ್ರಣಕ್ಕಾಗಿ ಸರ್ಕಾರದ ಕಟ್ಟುನಿಟ್ಟಿನ ಕ್ರಮಗಳೇನು;

ಆ) ಅತ್ಯಾಚಾರ ಮತ್ತು ಕೌಟುಂಬಿಕ ದೌರ್ಜನ್ಯಗಳ ಪ್ರಕರಣಗಳನ್ನು ಪತ್ತಿಕ್ಕಲು ಇಲಾಖೆಯ ಪರಿಣಾಮಕಾರಿ ಕ್ರಮಗಳೇನು;

ಇ) ಬೃಹದಾಕಾರವಾಗಿ ಬೆಳೆಯುತ್ತಿರುವ ಮಹಾನಗರದ ಸಮಗ್ರ ಭದ್ರತೆಗಾಗಿ ಬೇಕಾಗುವ ಪೊಲೀಸ್ ಸಿಬ್ಬಂದಿ ವರ್ಗವನ್ನು ಸರ್ಕಾರ ನೇಮಕ ಮಾಡುವ ಮತ್ತು ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿ ವಿಶೇಷ ತರಬೇತಿಯನ್ನು ನೀಡುವ ಮೂಲಕ ಸಾರ್ವಜನಿಕರ ಸುರಕ್ಷತೆಗೆ ಮುಂದಾಗಲು ಸರ್ಕಾರದ ಮುಂದಿರುವ ಯೋಜನೆಗಳು ಯಾವುವು?

ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು) (ಗೃಹ ಮತ್ತು ಸಾರಿಗೆ))

ಅ) ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆದ ಅಪರಾಧ ಪ್ರಕರಣಗಳು ಹಾಗೂ ಕೊಲೆ ಪ್ರಕರಣಗಳು ಈ ಕೆಳಕಂಡಂತಿರುತ್ತದೆ.

ಪ್ರಕರಣಗಳು	2011	2012	ಒಟ್ಟು
ಅಪರಾಧ ಪ್ರಕರಣಗಳು	28773	28473	57246
ಕೊಲೆ ಪ್ರಕರಣಗಳು	230	265	495

ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಎಲ್ಲಾ ಠಾಣಾ ವ್ಯಾಪ್ತಿಯಲ್ಲಿರುವ ನಿವಾಸಿಗಳಿಗೆ ಉಪ ಬೀಟ್ ಸಿಬ್ಬಂದಿಗಳ ಮುಖೇನಾ ಅವರು ಮನೆಯಲ್ಲಿರುವಾಗ ಮತ್ತು ಮನೆಯ ಹೊರಗಡೆ ಹಾಗೂ ತಮ್ಮ ತಮ್ಮ ಅಸ್ತಿ ಪಾಸ್ತಿಗಳ ರಕ್ಷಣೆ ಕುರಿತು ತಮ್ಮ ಜವಾಬ್ದಾರಿ ಮತ್ತು ಪೊಲೀಸರಿಗೆ ಸಹಕರಿಸುವ

ಕುರಿತು ಮಾಹಿತಿ ಇರುವ ಕರಪತ್ರಗಳನ್ನು ಮತ್ತು ಕೈಪಿಡಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ವಾಹನ ನಿಲುಗಡೆ ಪ್ರದೇಶಗಳಲ್ಲಿ, ಪ್ರಮುಖವಾದ ಮತ್ತು ಜನನಿಬಿಡಾದ ಪ್ರದೇಶಗಳಲ್ಲಿ ಸರಗಳ್ಳರ ಬಗ್ಗೆ, ವಾಹನ ಕಳವು ಮಾಡುವ ಆರೋಪಿಗಳ ಬಗ್ಗೆ ಎಚ್ಚರಿಕೆಯಿಂದ ಇರುವುದಾಗಿ ಬೃಹತ್ ಬ್ಯಾನರ್‌ಗಳನ್ನು ಆಳವಡಿಸಿ ಅರಿವು ಮೂಡಿಸಲಾಗಿರುತ್ತದೆ. ಬ್ಯಾಂಕ್‌ಗಳ ಬಳಿ ಎ.ಟಿ.ಎಂ, ಕೇಂದ್ರಗಳ ಬಳಿ, ಚಿನ್ನಾಭರಣದ ಅಂಗಡಿಗಳ ಬಳಿ ಗ್ರಾಹಕರ ಗಮನವನ್ನು ಬೇರೆಡೆ ಸೆಳೆದು ಅಪರಾಧವನ್ನು ಎಸಗುವಂತಹ ಆರೋಪಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗಿ ಬ್ಯಾನರ್‌ಗಳನ್ನು ಪ್ರದರ್ಶಿಸಲಾಗಿರುತ್ತದೆ.

ಅಲ್ಲದೇ ಮೇಲ್ಕಾಣಿಸಿರುವ ಎಲ್ಲಾ ಪ್ರದೇಶಗಳಲ್ಲಿ ಮತ್ತು ಸೂಕ್ತ ಪ್ರದೇಶಗಳನ್ನು ಜನಸ್ನೇಹಿ ಪಾಯಿಂಟ್‌ಗಳೆಂದು ಗುರ್ತಿಸಿ ಈ ಸ್ಥಳಗಳಲ್ಲಿ ಕಡ್ಡಾಯವಾಗಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಸಾರ್ವಜನಿಕರ ತೊಂದರೆಗಳಿಗೆ ಸ್ಪಂದಿಸುವ ಸಲುವಾಗಿ ಕಾರ್ಯಗತಗೊಳಿಸಲಾಗಿರುತ್ತದೆ. ಅಲ್ಲದೇ ಎಲ್ಲಾ ಗಸ್ತು ಅಧಿಕಾರಿ ಮತ್ತು ಸಿಬ್ಬಂದಿಗಳು ಆಗಿಂದಾಗ್ಗೆ ಎಲ್ಲ ಅಪರಾಧ ಸಂಭವಿಸುವಂತಹ ಪ್ರದೇಶಗಳಲ್ಲಿ ಎಚ್ಚರಿಕೆ ವಹಿಸುತ್ತಿರುತ್ತಾರೆ. ಬೆಳಗಿನ ಜಾವ ಮತ್ತು ಸಂಜೆ ವೇಳೆ ಹೊಯ್ಸಳ ವಾಹನಗಳಲ್ಲಿ ಧ್ವನಿವರ್ಧಕ ಮುಖಾಂತರ ಅಪರಾಧಗಳನ್ನು ತಡೆಗಟ್ಟುವ ಕುರಿತು ಸೂಚನೆಗಳನ್ನು ನೀಡಲಾಗುತ್ತಿದೆ.

ಠಾಣಾ ಸರಹದ್ದಿನಲ್ಲಿ ಪೊಲೀಸ್ ಠಾಣಾವಾರು ಸಾರ್ವಜನಿಕ ಸಂಪರ್ಕ ಸಭೆಗಳಲ್ಲಿ ನೆರೆಹೊರೆ ಕಾವಲು ಸಮಿತಿ ಸದಸ್ಯರ ಸಭೆಗಳಲ್ಲಿ ಶಾಂತಿ ಪಾಲನ ಸಮಿತಿ ಸಭೆಗಳಲ್ಲಿ ಸಾರ್ವಜನಿಕರೊಂದಿಗೆ ಅಪರಾಧ ಪತ್ತೆ ಮತ್ತು ತಡೆಗಟ್ಟುವ ಕುರಿತು ವಿಚಾರ ವಿನಿಮಯ ಮಾಡಲಾಗುತ್ತಿದೆ.

ಅಪರಾಧ ಪ್ರಕರಣಗಳ ನಿಯಂತ್ರಣಕ್ಕಾಗಿ ಎಲ್ಲಾ ಪೊಲಿಸ್ ಠಾಣಾ ಸರಹದ್ದಿನಲ್ಲಿ ಪರಿಣಾಮಕಾರಿಯಾಗಿ ಗಸ್ತು ಕರ್ತವ್ಯ ನಿರ್ವಹಿಸಲಾಗುತ್ತಿದ್ದು, ಸಿಬ್ಬಂದಿಗಳಿಗೆ ಪಾಯಿಂಟ್ ಕರ್ತವ್ಯಕ್ಕೆ ನೇಮಿಸಿ ಯಾವುದೇ ಅಪರಾಧ ಪ್ರಕರಣಗಳು ನಡೆಯದಂತೆ ಮುಂಜಾಗ್ರತೆ ವಹಿಸಲಾಗುತ್ತಿದೆ ಮತ್ತು ಗುಪ್ತ ಮಾಹಿತಿಯನ್ನು ಸಂಗ್ರಹಿಸಿ ಅಪರಾಧ ಚಟುವಟಿಕೆಯಲ್ಲಿ ತೊಡಗಿರುವವರ ಮೇಲೆ ರೌಡಿ ಹಾಳೆಯನ್ನು ದಾಖಲಿಸಿ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗುತ್ತಿದೆ.

ಪೊಲೀಸ್ ಠಾಣೆಗಳ ಸರಹದ್ದಿನಲ್ಲಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಎಲ್ಲಾ ಮುಂಜಾಗ್ರತಾ ಕ್ರಮಗಳು ಕೈಗೊಂಡು ಬಿ.ಎಂ.ಟಿ.ಸಿ. ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿ ಕಿಸೆಗಳವು, ಲ್ಯಾಪ್‌ಟಾಪ್ ಮತ್ತು ಇತರೆ ಕಳ್ಳತನ ಜರುಗುವ ಜೊತೆಗೆ ಸರಹದ್ದಿನ ಇತರೆ ಭಾಗಗಳಲ್ಲಿ ಗಮನ ಬೇರೆಡೆ ಸೆಳೆದು ವಂಚಿಸಿ ಕಳವು ಮಾಡುವ ಪ್ರಕರಣಗಳನ್ನು ತಡೆಗಟ್ಟಲು ಪಿ.ಎ.(ಪಬ್ಲಿಕ್ ಅನೌನ್ಸ್) ಸಿಸ್ಟಮ್‌ಗಳ ಮೂಲಕ ಪ್ರಯಾಣಿಕರು/ಸಾರ್ವಜನಿಕರನ್ನು ಜಾಗೃತಿಗೊಳಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಅದೇ ರೀತಿ ಸ್ವತ್ತು ಕಳವು ಪ್ರಕರಣಗಳನ್ನು ನಿಯಂತ್ರಣದಲ್ಲಿಡಲು ಈ ಹಿಂದೆ ಇಂತಹ ಅಪರಾಧಗಳು ಹೆಚ್ಚಾಗಿ ಘಟಿಸಿರುವ ಸ್ಥಳಗಳಲ್ಲಿ ಯಾವ ರೀತಿಯಲ್ಲಿ ದುಷ್ಕರ್ಮಿಗಳು ಅಪರಾಧ ಚಟುವಟಿಕೆಗಳನ್ನು ನಡೆಸುತ್ತಾರೆಂಬುದರ ಬಗ್ಗೆ ಮತ್ತು ಹಳೆ ಎಂ.ಓ. ಆರೋಪಿಗಳ ಭಾವಚಿತ್ರಗಳಿರುವ ಬ್ಯಾನರ್ಸ್‌ಗಳನ್ನು ಆಳವಡಿಸಲಾಗಿದೆ. ಜೊತೆಗೆ ಸಾರ್ವಜನಿಕರು ಹೇಗೆ ಪೊಲೀಸ್‌ರೊಂದಿಗೆ ಅಪರಾಧಗಳನ್ನು ನಿಯಂತ್ರಿಸಲು ಸಹಕರಿಸಬೇಕೆಂಬುದರ ಕರಪತ್ರಗಳನ್ನು ಸಾರ್ವಜನಿಕರಿಗೆ ಹಂಚಲಾಗುತ್ತಿದೆ. ವಿಶೇಷ ಜನಸ್ನೇಹಿ ಬೀಟ್ ಗಳಿಗೆ ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ ಅಪರಾಧಗಳನ್ನು ನಿಯಂತ್ರಿಸಲಾಗುತ್ತಿದೆ.

ಆ) ಒಂಟಿ ಮಹಿಳೆಯರು ವಾಸವಾಗಿರುವ ಮನೆಗಳನ್ನು ಉಪ ಬೀಟ್ ಸಿಬ್ಬಂದಿಗಳ ಮುಖೇನಾ ಗುರ್ತಿಸಿ ಅವರು ಮನೆಯಲ್ಲಿರುವಾಗ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಪ್ರತ್ಯೇಕವಾದ ಕರಪತ್ರಗಳನ್ನು, ಕೈಪಿಡಿಗಳನ್ನು ನೀಡಿ, ಅವರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯವು ಜಾರಿಯಲ್ಲಿರುತ್ತದೆ. ಅಲ್ಲದೇ ಒಂಟಿ ಮಹಿಳೆಯರಿರುವಂತಹ ನಿವಾಸಗಳ ಪೊಲೀಸ್ ಠಾಣಾ ವ್ಯಾಪ್ತಿಯ ಚೀತಾ ಮತ್ತು ಹೊಯ್ಸಳ ಗಸ್ತು ಸಿಬ್ಬಂದಿಗಳು ಆಗಿಂದಾಗ್ಗೆ ಆಯಾ ಮನೆಗಳ ಬಳಿ ಭೇಟಿ ನೀಡಿ, ನಿಗಾಹಿಸುವಂತೆ ಸೂಚಿಸಲಾಗಿರುತ್ತದೆ. ಹಾಗೂ ಅಂತಹ ಸ್ಥಳಗಳಲ್ಲಿ ಸಿಸಿ ಟಿವಿ ಕ್ಯಾಮರಾಗಳನ್ನು ಆಳವಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಆ ವೇಳೆಯಲ್ಲಿ ಬಸ್ ಸ್ಟಾಪ್‌ಗಳಲ್ಲಿ ಸಾರ್ವಜನಿಕ ವಾಹನಕ್ಕಾಗಿ ಮಹಿಳೆಯರು ಕಾಯುತ್ತಿದ್ದಲ್ಲಿ ಅವರಿಗೆ ಸೂಕ್ತ ರಕ್ಷಣೆ ಒದಗಿಸುವ ಸಲುವಾಗಿ ಚೀತಾ ಮತ್ತು ಹೊಯ್ಸಳ ವಾಹನಗಳಿಗೆ ಮತ್ತು ಗಸ್ತು ಅಧಿಕಾರಿ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.

ಕೌಟುಂಬಿಕ ಸಮಸ್ಯೆಗಳನ್ನು ತಡೆಗಟ್ಟುವ ಸಲುವಾಗಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಸಿಬ್ಬಂದಿಗಳು ಮತ್ತು ಪೊಲೀಸ್ ಆಯುಕ್ತರವರ ಕಛೇರಿಯಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ರವರುಗಳಿಂದ ಕೌನ್ಸಿಲಿಂಗ್ ಮೂಲಕ ಬಗೆಹರಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಅತ್ಯಾಚಾರ ಮತ್ತು ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ವರದಿಯಾದಲ್ಲಿ ಅಂತಹ ಮಹಿಳೆಯರಿಗೆ ಸೂಕ್ತ ಕಾನೂನು ನೆರವನ್ನು ನೀಡಲಾಗುತ್ತಿದೆ. ಮತ್ತು ಮಹಿಳೆಯರ ದೂರುಗಳಿಗೆ ತಕ್ಷಣ ಸ್ಪಂದಿಸಲು ಎಲ್ಲಾ ಪೊಲೀಸ್ ಠಾಣೆಗಳಲ್ಲೂ ಪ್ರತ್ಯೇಕ ಮಹಿಳಾ ದೂರು ವಿಭಾಗವನ್ನು ಆರಂಭಿಸಲಾಗಿದೆ ಮತ್ತು ಮಹಿಳೆಯರು ಹೆಚ್ಚಾಗಿ ಓಡಾಡುವ ಪ್ರದೇಶದಲ್ಲಿ ಗಸ್ತು ತಿರುಗಲು ಅಭಯ ಎಂಬ ವಾಹನಕ್ಕೆ ಮಹಿಳಾ ಸಿಬ್ಬಂದಿಗಳನ್ನು ನೇಮಿಸಿ ಮಹಿಳೆಯರ ತೊಂದರೆಗಳಿಗೆ ಪರಿಹಾರವನ್ನು ಒದಗಿಸಲಾಗುತ್ತಿದೆ.

ಅಂತಹ ಅಪರಾಧ ಪ್ರಕರಣಗಳ ನಿಯಂತ್ರಣಕ್ಕಾಗಿ ಮಹಿಳಾ ಸಂಘದ ಪಾಧಿಕಾರಿಗಳ ಸಭೆ ನಡೆಸಿ ಮಹಿಳೆಯರಿಗೆ ಇರುವ ಹಕ್ಕುಗಳ ಹಾಗೂ ಕಾನೂನು ಬಗ್ಗೆ ತಿಳುವಳಿಕೆ ನೀಡಲಾಗಿದೆ. ಹಾಗೂ ಗಾರ್ಮೆಂಟ್ಸ್ ಫ್ಯಾಕ್ಟರಿಗಳ ಹತ್ತಿರ ಹೋಗಿ ಅಲ್ಲಿ ಸಭೆ ನಡೆಸಿ ಹಿರಿಯ ಮಹಿಳಾ ಅಧಿಕಾರಿಗಳಿಂದ ತಿಳುವಳಿಕೆ ನೀಡಲಾಗಿದೆ. ಹಾಗೂ ಠಾಣೆ ಸರಹದ್ದಿನಲ್ಲಿ ಬೀಟ್, ಸಬ್ ಬೀಟ್‌ಗಳಂತೆ ಸಂಬಂಧಪಟ್ಟ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಸಭೆಯನ್ನು ಏರ್ಪಡಿಸಿ ಮಹಿಳೆಯರಿಗೆ ಎಲ್ಲಾ ತರಹದ ವಿಷಯಗಳ ಬಗ್ಗೆ ಮನನ ಮಾಡಿಕೊಟ್ಟಿರುತ್ತಾರೆ.

ಅತ್ಯಾಚಾರ ಮತ್ತು ಕೌಟುಂಬಿಕ ನಿಯಂತ್ರಣಕ್ಕಾಗಿ ಠಾಣಾ ಸರಹದ್ದಿನಲ್ಲಿ ಪ್ರತಿನಿತ್ಯ ಸಿಬ್ಬಂದಿಗಳಿಗೆ ಮೂರು ಪಾಳೆಯಲ್ಲಿ ಜನಸ್ನೇಹಿ ಕರ್ತವ್ಯಕ್ಕೆ ನೇಮಕ ಮಾಡುತ್ತಿದ್ದು, ಪ್ರತಿ ಪಾಳಿ ಬೆಳಿಗ್ಗೆ 6.00 ರಿಂದ 2.00 ಗಂಟೆ 2.00ರಿಂದ 10.00 ಗಂಟೆ ಹಾಗೂ ರಾತ್ರಿ 8.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆಯವರೆಗೆ ಹಾಗೂ ಹೊಯ್ಸಳ ಎರಡು ಚೀತಾಗಳು ದಿನದ 24 ಗಂಟೆಗಳಲ್ಲಿ ಗಸ್ತು ಮಾಡಲು ನಿಯೋಜಿಸಲಾಗಿದ್ದು, ಇದಲ್ಲದೆ ಮೇಲುಸ್ತುವಾರಿಯಾಗಿ ಪಿ.ಎಸ್.ಐ. ಹಾಗೂ ಎ.ಎಸ್.ಐ. ರವರುಗಳ ಸಹ ಸರಹದ್ದಿನಲ್ಲಿ ಗಸ್ತು, ಅಭಯ ಗಸ್ತು ವಾಹನದ ಮೂಲಕ ಅತ್ಯಾಚಾರ ಮತ್ತು ಕೌಟುಂಬ ದೌರ್ಜನ್ಯ ಜರುಗದಂತೆ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಲಾಗುತ್ತದೆ.

ಅತ್ಯಾಚಾರ ಮತ್ತು ಕೌಟುಂಬಿಕ ದೌರ್ಜನ್ಯಗಳು ನಡೆದಲ್ಲಿ ಕಾನೂನು ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಬೃಹದಾಕಾರವಾಗಿ ಬೆಳೆಯುತ್ತಿರುವ ಮಹಾನಗರದ ಸಮಗ್ರ ಭದ್ರತೆಗಾಗಿ, ಹಾಲಿಯಿರುವ ಸಿಬ್ಬಂದಿಗಳಿಂದಲೇ ಸಮಗ್ರ ಕ್ರಮವನ್ನು ಕಾನೂನು ಬದ್ದವಾಗಿ ಕೈಗೊಳ್ಳಲಾಗುತ್ತಿದೆ ಮತ್ತು ಆಧುನಿಕ ತಂತ್ರಜ್ಞಾನವನ್ನು ಸಹ ಉತ್ತಮ ಗುಣಮಟ್ಟದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಸಿಬ್ಬಂದಿಯ ಕೊರತೆ ನೀಗಿಸಲು ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಹಾಗೂ ಆಧುನಿಕ ತಂತ್ರಜ್ಞಾನವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬಳಸಿಕೊಳ್ಳಲು ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.